Indian Journal of History and Archaeology

ISSN (E):2582-225X
VOL-1 ISSUE 6, MARCH-APRIL, 2020, 12-22

# ಹಾಸನ ಜಿಲ್ಲೆಯಲ್ಲಿ ಶ್ರೀ ವೈಷ್ಣವ ಧರ್ಮದ ಬೆಳವಣಿಗೆ

## (ವಿಶೇಷವಾಗಿ ಅರಸೀಕೆರೆ ತಾಲ್ಲೂಕನ್ನು ಅನುಲಕ್ಷಿಸಿ)

**ರಾಜೇಶ್‌ಖನ್ನಾ,**

*'ಮಹಿಳೆಯರು ವಿಶ್ವದ ಅರ್ಧದಷ್ಟು ಜನಸಂಖ್ಯೆಯನ್ನು ಹೊಂದಿದ್ದಾರೆ. ಆದರೆ, ಒಟ್ಟು ಕೆಲಸದ ಸಮಯದಲ್ಲಿ ಮೂರನೇ ಎರಡರಷ್ಟು ನಿರ್ವಹಿಸುತ್ತಿದ್ದಾರೆ. ಹತ್ತನೇ ಒಂದು ಭಾಗ ಅಥವಾ ವಿಶ್ವದ ಆದಾಯವನ್ನು ಪಡೆಯುತ್ತಾರೆ ಮತ್ತು ವಿಶ್ವದ ನೂರನೇ ಒಂದು ಭಾಗಕ್ಕಿಂತ ಕಡಿಮೆ ಆಸ್ತಿಯನ್ನು ಹೊಂದಿದ್ದಾರೆ.' – United Nations Report, 1980.*

**ರಾಜೇಶ್‌ಖನ್ನಾ,**
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಅರಸೀಕೆರೆ ಹಾಗೂ ಸಂಶೋಧನಾ
ವಿದ್ಯಾರ್ಥಿ, ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಅರಸೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಚಿಟ್ಟೇನಹಳ್ಳಿ, ಚಲುವನಹಳ್ಳಿ, ತಳಲೂರು, ಬೊಮ್ಮೇನಹಳ್ಳಿ ಭಾಗಗಳಲ್ಲಿ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ವಿಶೇಷವಾಗಿ ಗವಿ ವರ್ಣಚಿತ್ರಗಳು ದೊರೆತಿರುವುದು ವಿಶೇಷವಾಗಿದೆ. ಸಕಲೇಶಪುರದ ಹೇಮಾವತಿ ತೀರದಲ್ಲಿ ಬೃಹತ್ ಶಿಲಾಯುಗ ಕಾಲದ ನೆಲೆಯಲ್ಲಿ ಅಸ್ಥಿಪಂಜರಗಳುಳ್ಳ ಗೋರಿಗಳ ಕುರುಹುಗಳು ದೊರೆತಿವೆ. ಅರಸೀಕೆರೆ ತಾಲ್ಲೂಕು ಭೌಗೋಳಿಕವಾಗಿ ಬರಡು ನೆಲವಾದರೂ ಶಿಲ್ಪಕಲೆಯಿಂದ ಸಮೃದ್ಧವಾಗಿದೆ. ಅರಸೀಕೆರೆಯ 'ಶಿವಾಲಯ', ಹಾರನಹಳ್ಳಿಯ 'ಸೋಮೇಶ್ವರ' ದೇವಾಲಯ, ಜಾವಗಲ್ಲಿನ 'ನರಸಿಂಹಸ್ವಾಮಿ' ದೇವಾಲಯ ನಾಗಪುರಿಯ 'ಶಂಕರಲಿಂಗ' ದೇವಾಲಯ ಈ ದೇವಾಲಯಗಳು 13ನೇ ಶತಮಾನದ ಹೊಯ್ಸಳ ದೇವಾಲಯಗಳು. ಮತ್ತೊಂದು ಪುರಾಣ ಪ್ರಸಿದ್ಧ ಸ್ಥಳ 'ಬಾಣಾವಾರ'. ಈ ಹೆಸರು ಬರಲು ಶ್ರೀರಾಮನ ವನವಾಸ ಕಾಲದಲ್ಲಿ ಲಕ್ಷ್ಮಣ ತನ್ನ ಬಾಣದ ಬತ್ತಳಿಕೆಯನ್ನು ನೆಲದಲ್ಲಿಟ್ಟಿದ್ದರಿಂದ ಈ ಹೆಸರು ಬಂದಿದೆ. ಅರಸೀಕೆರೆ ಸಮೀಪ ಚಿಕ್ಕ ತಿರುಪತಿ ಎಂದು ಪ್ರಸಿದ್ಧ ದೇವಾಲಯವಿದ್ದು ಅದನ್ನು ಮಾಲೇಕಲ್ ತಿರುಪತಿ ಎಂದು ಕರೆಯುತ್ತಾರೆ. ಕೋಡೀಮಠ ಎಂಬ ಮಠವೊಂದಿದ್ದು ಇಲ್ಲಿಗೆ ಭಾರತದ

ಮಾಜಿ ರಾಷ್ಟ್ರಪತಿ ಜೈಲ್ ಸಿಂಗ್, ಮಾಜಿ ಪ್ರಧಾನಿ ದಿವಂಗತ. ಇಂದಿರಾಗಾಂಧಿಯವರು ಸೇರಿದಂತೆ ಹಲವು ರಾಜಕೀಯ ಪ್ರಮುಖರು ಈ ಮಠದೊಡನೆ ಒಡನಾಟ ಹೊಂದಿದ್ದಾರೆ. ಇವಲ್ಲದೆ ಕಣಕಟ್ಟೆ, ಕರಗುಂದ, ಬಂದೂರು, ಹಿರೇಹಳ್ಳಿ, ಜಾವಗಲ್ಲು, ಸಿಂದಗೆರೆ, ಹಳೇ ಬೆಳವಾಡಿ ಮುಂತಾದ ಕಡೆ ಜಿನಾಲಯ ಮತ್ತು ಅದರ ಪಳೆಯುಳಕೆಗಳು ಕಾಣುತ್ತವೆ.

ಹೆಸರೆ ಸೂಚಿಸುವಂತೆ ಸಕಲೇಶ್ವರದಿಂದ ಕೂಡಿದ್ದು, ತಾಲ್ಲೂಕು ಕೇಂದ್ರವಾಗಿದೆ. ಪ್ರವಾಸೋದ್ಯಮಕ್ಕೆ ಸೂಕ್ತ ಸೌಲಭ್ಯಗಳಿದ್ದು, ಕಾಫಿ, ಮೆಣಸು, ಏಲಕ್ಕಿ ಪ್ರಮುಖ ವಾಣಿಜ್ಯ ಬೆಳೆಯಾಗಿವೆ. ನಗರದಿಂದ ೮ಕಿ.ಮೀ. ಮಂಗಳೂರು ಹೆದ್ದಾರಿಯಲ್ಲಿ ಸಾಗಿದರೆ ಎಡಭಾಗದ ದುರ್ಗಮ ಪ್ರದೇಶದಲ್ಲಿ ಟಿಪ್ಪು ಕಾಲದಲ್ಲಿ ನಿರ್ಮಿಸಿದ ಫ್ರೆಂಚ್ ಮಾದರಿಯ ನಕ್ಷತ್ರಾಕಾರದ ಕೋಟೆ ಟಿಪ್ಪು ಕಾಲದಲ್ಲಿ ನಿರ್ಮಾಣವಾದ ಏಕೈಕ ಕೋಟೆಯನ್ನು ಕಾಣಬಹುದು.ಇದನ್ನು ಮಂಜರಾಬಾದ್ ಕೋಟೆ ಎನ್ನಲಾಗಿದೆ. ಮುಂದುವರೆದು ಈ ತಾಲ್ಲೂಕಿನಲ್ಲೆ ಬರುವ ಮತ್ತೊಂದು ಪ್ರವಾಸೋದ್ಯಮ ಆಕರ್ಷಕ ಸ್ಥಳ “ಬಿಸಲೆ ಘಾಟ್” ಈ ಸ್ಥಳವು ಹಲವು ಗಿರಿಧಾಮ ಮತ್ತು ಜಲಪಾತಗಳನ್ನು ಹೊಂದಿದ್ದು, ಸುಬ್ರಮಣ್ಯ ಮಾರ್ಗದಲ್ಲಿದ್ದು ಪ್ರವಾಸೋದ್ಯಮದ ಆಕರ್ಷಕ ಸ್ಥಳವಾಗಿದೆ.

ವಿಶ್ವದ ಧರ್ಮಗಳಲ್ಲಿ ಹಿಂದು ಧರ್ಮವು ಅತ್ಯಂತ ಪ್ರಾಚೀನವಾದುದು. ಹಿಂದು ಧರ್ಮದಲ್ಲಿ ಎರೆಡು ಶಾಖೆಗಳನ್ನು ನಾವು ಕಾಣಬಹುದು. ಒಂದು ಶೈವ ಧರ್ಮ. ಮತ್ತೊಂದು ವೈಷ್ಣವ ಧರ್ಮ. ವಿಷ್ಣುವಿನ ಪಾರಮ್ಯವನ್ನು ಸಾರುವ ಶ್ರೀವೈಷ್ಣವ ಧರ್ಮ. ಭಾಗವತ ಮೂಲದ ವಿಷ್ಣುವಿನ ಆರಾಧನೆಯೇ ಶ್ರೀ ವೈಷ್ಣವ ಧರ್ಮದ ಮೂಲ. 12ನೇ ಶತಮಾನದಿಂದ ಕರ್ನಾಟಕದಲ್ಲಿ ರಾಮಾನುಜರ ಆಗಮನಕ್ಕಿಂತ ಬಹಳ ಹಿಂದಿನಿಂದಲೇ ಪ್ರಚಾರದಲ್ಲಿತ್ತು. ಹಾಸನ ಜಿಲ್ಲೆಯಲ್ಲಿ ದೊರೆತ ಕದಂಬರ ಹಲ್ಮಿಡಿ ಶಾಸನದಲ್ಲಿ ವಿಷ್ಣುವಿನ ಪ್ರಾರ್ಥನೆಯನ್ನು ನಾವು ಕಾಣಬಹುದು. ರಾಮಾನುಜರ ಆಗಮನದ ನಂತರ ಹೊಯ್ಸಳರ ರಾಜ್ಯದಲ್ಲಿ ಶ್ರೀವೈಷ್ಣವರ ಧರ್ಮ ದಕ್ಷಿಣ ಕರ್ನಾಟಕದ ಹಲವಾರು ಬಾಗಗಳಲ್ಲಿ ನೆಲೆನಿಂತು ಉನ್ನತ ಸ್ಥಾನವನ್ನು ಪಡೆಯಿತು. 16ನೇ ಶತಮಾನದವರೆಗೆ ಶ್ರೀ ವೈಷ್ಣವ ಧರ್ಮ ಹಾಸನ ಜಿಲ್ಲೆಯಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಬೆಳೆದು ರಾಜಾಶ್ರಯವನ್ನು ಪಡೆದುದಲ್ಲದೇ ಸಿರಿವಂತರು, ಅಧಿಕಾರಿಗಳು, ವರ್ತಕರು, ಜನಸಾಮಾನ್ಯರನ್ನು ತನ್ನ ಕಡೆಗೆ ಆಕರ್ಷಿಸಿಕೊಂಡು, ಸಮಾಜ, ಸಂಸ್ಕೃತಿ, ಸಾಹಿತ್ಯ, ಕಲೆಯ ಕ್ಷೇತ್ರದಲ್ಲಿ ಶ್ರೀ ವೈಷ್ಣವ ಧರ್ಮ ಪ್ರಭಾವವನ್ನು ಬೀರಿತ್ತು.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ವೈಷ್ಣವ ಪಂಥ ಮಹತ್ವದ ಸಂಚಲನಕ್ಕೆ ಕಾರಣವಾದದ್ದು, ಕರ್ನಾಟಕಕ್ಕೆ ರಾಮಾನುಜರ ಆಗಮನದನಂತರ. ಇದನ್ನು ಅಧ್ಯಯನದ ದೃಷ್ಟಿಯಿಂದ ಮೊದಲ ಘಟ್ಟವೆಂದು ಕರೆಯಬಹುದು. ಅಲ್ಲದೆ ಇದು ಮಾಧ್ವರು ಬೋಧಿಸಿದ್ದ ವೈಷ್ಣವ ಪಂಥಕ್ಕಿಂತ ವಿಭಿನ್ನವಾದುದು ಧರ್ಮಬೋಧನೆಯ ದೃಷ್ಟಿಯಿಂದ, ಈಗಾಗಲೇ ಕರ್ನಾಟಕದಲ್ಲಿದ್ದ ವೈಷ್ಣವ ಪಂಥದ ಅನುಯಾಯಿಗಳನ್ನು

ಸಂಘಟಿಸುವ ಆಶಯದಿಂದ ಕರ್ನಾಟಕಕ್ಕೆ ಆಗಮಿಸಿದ ರಾಮಾನುಜಾಚಾರ್ಯರು ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ವದ ಅಧ್ಯಯನಕ್ಕೆ ನಾಂದಿ ಹಾಡಿದರು. ಮಧ್ಯಕಾಲೀನ ಭಾರತದ ಇತಿಹಾಸದಲ್ಲಿಯೇ ಒಂದು ಮಹತ್ವಪೂರ್ಣವಾದ ಬೆಳವಣಿಗೆಗೆ ಕಾರಣೀಭೂತರಾದರು. ಒಟ್ಟಾರೆ, ಮಧ್ವಾಚಾರ್ಯರು, ಬೋಧಿಸಿದ ವೈಷ್ಣವ ಪಂಥ ಮತ್ತು ರಾಮಾನುಜಾಚಾರ್ಯರು ಬೋಧಿಸಿದ ಶ್ರೀವೈಷ್ಣವ ಪಂಥಗಳೆರಡೂ ಕರ್ನಾಟಕದಲ್ಲಿದ್ದವೆಂಬುದನ್ನು ಒಪ್ಪಬೇಕು. ಕನಾಟಕದಲ್ಲಿ ವೈಷ್ಣವ ಪಂಥವು ಮಧ್ವಾಚಾರ್ಯರಿಗಿಂತ ಮೊದಲು ಅನುಷ್ಠಾನದಲ್ಲಿದ್ದರೂ ಅದಕ್ಕೊಂದು ತಾತ್ವಿಕ ಅಡಿಪಾಯವನ್ನು ಒದಗಿಸಿಕೊಟ್ಟ ಕೀರ್ತಿ ಮಧ್ವಾಚಾರ್ಯರಿಗೆ ಸಲ್ಲುತ್ತದೆ. ಅವರು ಆ ಪಂಥವನ್ನು ದ್ವೈತವೆಂದು ಕರೆದು, 'ಭೇದೋ ಜೀವಗಣಾಃ' ಎಂದು ವಿವರಿಸಿದರು. ಅಂದರೆ ಜೀವ ಮತ್ತು ಪರಮಾತ್ಮರ ನಡುವೆ ಭೇದವಿರುವುದರಿಂದ ಎಲ್ಲರೂ ಪರಮಾತ್ಮನಲ್ಲಿ ಐಕ್ಯವಾಗಲು ಸಾಧ್ಯವಿಲ್ಲ ಎಂದು ಹೇಳಿದರು. ಅಂದರೆ ಈ ಪಂಥದ ವ್ಯಾಪ್ತಿ ಸೀಮಿತವಾದುದಾಯಿತು. ಇದರಿಂದಾಗಿ ಇದು ಹೆಚ್ಚು ಜನಪ್ರಿಯವಾಗಲು ಸಾಧ್ಯವಾಗಲಿಲ್ಲ. ಆದರೂ ಇತರ ಮತ– ಪಂಥಗಳೊಂದಿಗೆ ಪೈಪೋಟಿಗಿಳಿದ ಇದು ರಾಮಾನುಜರಂತೆ ಬೆಸ್ತರು, ಕೊರಮರು, ಕುರುಬರು, ಬೋವಿಗಳು, ಮಲೆಯರು, ನಾಡವರು, ಬಡಗಿಗಳು, ಕೊರಚರು, ಚಿಟ್ಟು, ಪಾಡಿ, ಬಲ್ಲಾಳ ಮತ್ತು ಜೈನ ಮೊದಲಾದವರಿಗೆ ಮಾಧ್ವ ದೀಕ್ಷೆ ನೀಡಿ ತಮ್ಮವರನ್ನಾಗಿ ಮಾಡಿಕೊಳ್ಳುವುದರ ಮೂಲಕ ತಮ್ಮ ಅನುಯಾಯಿಗಳನ್ನು ಅಧಿಕಗೊಳಿಸಿಕೊಂಡರೇ ಹೊರತು ಅವರನ್ನು ಮೂಲತಃ ವೈಷ್ಣವರನ್ನಾಗಿಸುವಲ್ಲಿ ವಿಫಲವಾದರು. ಸಂಖ್ಯಾದೃಷ್ಟಿಯಿಂದ ಇದು ಪ್ರಬಲವಾಯಿತಾದರೂ ಪ್ರಭಾವ–ಪರಿಣಾಮಗಳ ದೃಷ್ಟಿಯಿಂದ ಇದು ಸಮಾಜದ ಮೇಲೆ ಅಷ್ಟೇನೂ ಪರಿಣಾಮ ಬೀರಿದಂತೆ ತೋರುವುದಿಲ್ಲ.

ಶ್ರೀ ವೈಷ್ಣವ ಧರ್ಮದ ಪ್ರಚಾರಕ್ಕೆ ಅನುಸರಿಸಿದ ಮಾರ್ಗಗಳು

1) ರಾಮಾನುಜಾಚಾರ್ಯರ ಆಗಮನ
2) ಹರಿಕಥೆ ಮತ್ತು ನಾಟಕಗಳ ಪ್ರದರ್ಶನ
3) ಅಗ್ರಹಾರ ಮತ್ತು ಮಠಗಳ ನಿರ್ಮಾಣ
4) ದೇವಾಲಯಗಳ ಸ್ಥಾಪನೆ

**ರಾಮಾನುಜಾಚಾರ್ಯರ ಆಗಮನ**: ಚೋಳ ಅರಸ ಎರಡನೇ ಕುಲೋತ್ತುಂಗ ಚೋಳ ವೈಷ್ಣವರಾದ ಶ್ರೀರಾಮಾನುಜಾರಿಗೆ ಕಿರುಕುಳ ನೀಡಿದ್ದರಿಂದ ಕರ್ನಾಟಕಕ್ಕೆ ಆಗಮಿಸಿದರು. ಅನಂತರ ಹಾಸನದ ಮಿರ್ಲೆ, ಸಾಲಿಗ್ರಾಮ, ತೊಣ್ಣೂರು, ಬೇಲೂರುಗಳಲ್ಲಿ ಕೆಲದಿನಗಳು ತಂಗಿದ್ದು, ಧರ್ಮಪ್ರಚಾರ ಕೈಗೊಂಡರೆಂದು

ತಿಳಿದುಬರುತ್ತದೆ. ಬೇಲೂರು ಪ್ರಮುಖವಾಗಿ ಶ್ರೀವೈಷ್ಣವ ಕೇಂದ್ರವಾಗಿದ್ದು ಅಲ್ಲಿನ ಕೇಶವನ ದೈನಂದಿನ ಪೂಜಾಕಾರ್ಯಕ್ಕೆ ಹಳ್ಳಿಗಳನ್ನು ದಾನನೀಡಿದ ಉಲ್ಲೇಖಗಳಿವೆ. ದುರ್ಗದ ರಂಗಪ್ಪನಾಯಕರಿಂದ ಬಾಣಾವರಕ್ಕೆ ಸಲ್ಲುವ ಸೊಪ್ಪಿನ ಹಳ್ಳಿಯನ್ನು ದಾನಪಡೆದ ತಿರುವೆಂಗಳಯ್ಯನನ್ನು ಆ ಗ್ರಾಮವನ್ನು ಬೇಲೂರ ಚೆಂನಿಗರಾಯನಿಗೆ ಸಮರ್ಪಿಸಿದ್ದಾನೆ. ಬೇಲೂರಿನ ಶಾಸನದಲ್ಲಿ ಶ್ರೀ ಚನ್ನಕೇಶವದೇವರ ನಂದಾದೀಪಕ್ಕೆ ಕಂಬದ ಧರ್ಮಕ್ಕೆ ಸಂಕಿಹಳ್ಳಿ ಗ್ರಾಮವನ್ನು ನೀಡಿರುವ ವಿಚಾರ ತಿಳಿದುಬರುತ್ತದೆ.

ರಾಮಾನುಜರ ಆಗಮನದಿಂದ ಕನ್ನಡನಾಡಿಗೆ ತಮಿಳುನಾಡಿನ ಬೇರೆ ಬೇರೆ ಗುಂಪಿನ ಬ್ರಾಹ್ಮಣ ಕುಟುಂಬಗಳು ಬಂದವು. ಭಟ್ಟರು, ಹೆಬ್ಬಾರರು, ಹೆಮ್ಮಿಗೆಯರು, ಕಡಂಬಿಯರು, ಕಂದಾಡೈಯರು, ನಲ್ಲಾನ್ ಚಕ್ರವರ್ತಿಗಳು, ತಾತಾಚಾರ್ಯರು ಹಾಗೂ ಇತರೆ ಧರ್ಮನಿಷ್ಠ ಮತ್ತು ವಿದ್ವಾಂಸ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ ಕುಟುಂಬಗಳು ವಲಸೆ ಬಂದು ಈ ನಾಡಿನಲ್ಲಿ ನಿಂತರು. ವಲಸೆ ಬಂದ ಜನರಿಗೆ ಶ್ರೀ ವೈಷ್ಣವ ದೀಕ್ಷೆ ಪಂಚ ಸಂಸ್ಕಾರಗಳು ತಪ, ಪುಂಡ್ರ, ನಾಮ, ಮಂತ್ರ ಯಜ್ಞ ಪಡೆದು ಮತಾಂತರಗೊಳಿಸಿ ಶ್ರೀವೈಷ್ಣವ ಧರ್ಮದ ಪ್ರಸಾರದ ಜವಾಬ್ದಾರಿಯನ್ನು ನೀಡಲಾಯಿತು.

**ಹರಿಕಥೆ ಮತ್ತು ನಾಟಕಗಳ ಪ್ರದರ್ಶನ** : ರಾಮಾನುಜಾಚಾರ್ಯರ ಜೊತೆಯಲ್ಲಿ ಬಂದ ಭಕ್ತರು ಶ್ರೀವೈಷ್ಣವ ಧರ್ಮದ ಪ್ರಚಾರಕ್ಕೆ ಶ್ರೀಕೃಷ್ಣ ಭಕ್ತರ ಕತೆಗಳನ್ನು, ರಂಗಭೂಮಿಯ ನಾಟಕಗಳ ಮೂಲಕ ಕೃಷ್ಣ ತುಲಾಭಾರ, ರಾಧನಾಟಕ, ಕೃಷ್ಣಪಾರಿಜಾತ, ಭಕ್ತ ಸುಧನ್ವ, ಪ್ರಹ್ಲಾದ ಇತ್ಯಾದಿ ಹರಿಕಥೆ ನಾಟಕಗಳ ಮೂಲಕ ಶ್ರೀ ವೈಷ್ಣವ ಧರ್ಮದ ಪ್ರಚಾರವನ್ನು ವ್ಯಾಪಕವಾಗಿ ಮಾಡಿದರು.

**ಅಗ್ರಹಾರ ಮತ್ತು ಮಠಗಳ ನಿರ್ಮಾಣ** : ಶ್ರೀ ರಾಮಾನುಜರ ಹಿಂಬಾಲಕರು ಹಲವಾರು ಸ್ಥಳಗಳಲ್ಲಿ ಅಗ್ರಹಾರಗಳನ್ನು ಮತ್ತು ಮಠಗಳನ್ನು ನಿರ್ಮಾಣ ಮಾಡಿಕೊಂಡು ಶ್ರೀವೈಷ್ಣವ ಧರ್ಮದ ಪ್ರಸಾರ ಕಾರ್ಯವನ್ನು ಕೈಗೊಂಡರು. ಹಿರಿಯ ದಂಡನಾಯಕ ದಾವಪೈಯನು ವಿಷ್ಣುವರ್ಧನನಿಂದ ನೀರ್ಗುಂದನಾಡ ತಳರೂರನ್ನು ಪಡೆದು ಅಗ್ರಹಾರವಾಗಿ ಮಾಡಿ 62 ಮಹಾಜನರಿಗೆ ನೆಲೆಸಲು ಅವಕಾಶ ಕಲ್ಪಿಸಿಕೊಟ್ಟನು. ನರಸಿಂಹಪುರ, ಕೇಶವಪುರ, ಬಲ್ಲಾಳ ಚತುರ್ವೇದಿಮಂಗಲ, ಜಯಗೊಂಡಬಲ್ಲಾಳಪುರ ಇತ್ಯಾದಿ ಹೆಸರುಗಳಿಂದ ಈ ಪ್ರದೇಶದಲ್ಲಿ 25 ಕ್ಕೂ ಹೆಚ್ಚು ಅಗ್ರಹಾರಗಳನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ಶ್ರೀ ವೈಷ್ಣವ ಧರ್ಮದ ಪ್ರಚಾರಕ್ಕೆ ಅನುಕೂಲ ಮಾಡಿಕೊಡಲಾಯಿತು. ಕ್ರಿ. ಶ. 1142 ಕ್ಕೆ ಮೊದಲು ಹೊಯ್ಸಳ ವಿಷ್ಣುವರ್ಧನನು ಕೆಲ್ಲಂಗೆರೆಯನ್ನು ಅಗ್ರಹಾರವಾಗಿ ಪರಿವರ್ತಿಸಿ ಕೊಡಂಗನೂರಿನಿಂದ ಬ್ರಾಹ್ಮಣರನ್ನು ಕರೆತಂದು ಅಲ್ಲಿ ನೆಲೆಸುವಂತೆ ಮಾಡಿ ಶ್ರೀವೈಷ್ಣವ ಧರ್ಮದ ಪ್ರಚಾರಕ್ಕೆ ಅನುವು ಮಾಡಿಕೊಟ್ಟನು.

ಉಂಡಿಗನಾಳು ಗ್ರಾಮವನ್ನು ಜಟ್ಟಿಗಳು ಅಗ್ರಹಾರವನ್ನಾಗಿ ಮಾರ್ಪಡಿಸಿ ಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡರು.

ಅನಂತರದಲ್ಲಿ ತ್ರಿಮತಸ್ತ ಬ್ರಾಹ್ಮಣ ಮಠಗಳು (ಹಾಸನ) ಈ ಪ್ರದೇಶದಲ್ಲಿ ಇದ್ದುವೆಂಬುದಕ್ಕೆ ಕೆಲವು ಶಾಸನಗಳು ಸೂಚನೆ ನೀಡುತ್ತವೆ. ಶಿವ ವಿಷ್ಣು ಶಕ್ತಿಯ ಆರಾಧಕರಾದ ಸ್ಮಾರ್ಥರಲ್ಲದೆ ಶ್ರೀವೈಷ್ಣವರು ದೇವಾಲಯಗಳನ್ನು ಮಠಗಳನ್ನು ಕಟ್ಟಿಕೊಂಡು ಅಧ್ಯಯನ ಅಧ್ಯಾಪನಗಳೊಂದಿಗೆ ಧಾರ್ಮಿಕ ಚಟುವಟಿಕೆಗಳನ್ನು ಧರ್ಮ ಪ್ರಚಾರವನ್ನು ಕೈಗೊಂಡರೆಂದು ತಿಳಿದುಬರುತ್ತದೆ. ಅರಸೀಕೆರೆ ತಾಲುಕಿನ ಕೆಲ್ಲಂಗೆರೆಯ ಶ್ರೀಮಠವೊಂದಿದ್ದು, ಈ ಮಠವನ್ನು ಶ್ರೀ ರಾಮಕೃಷ್ಣ ದೇವರ ಪುತ್ರರು ಶ್ರೀ ಶಾಶ್ವತಾತ್ಮರು ನಡೆಸುತ್ತಿದ್ದರು. “ಶ್ರೀ ಶಾಶ್ವತಾತ್ಮ ಶ್ರೀಮಠ” ಎಂದು ಕೆರಯಲಾಗಿದೆ. ಕಣಕಟ್ಟೆಯ ಶೃಂಗನಾಥ ದೇವಾಲಯದ ಹಿಂದಿನ ಸಂಧ್ಯಾ ಮಂಟಪವೊಂದನ್ನು ದೇವಣ್ಣ ಹೆಬ್ಬರುವರು ನರಸಿಂಹ ದೇವನು ತಂಮಣ್ಣಗಳ ದೇವರು ಕಟ್ಟಿಸಿದ್ದರಿಂದು ಇಲ್ಲಿನ ಶಾಸನ ಹೇಳುತ್ತದೆ. ಹಾರನಹಳ್ಳಿಯಲ್ಲಿ ಶೃಂಗೇರಿ ಪೀಠದ ಸಂಬಂಧಿತ ಮಠವಿತ್ತೆಂಬುದನ್ನು ಸ್ಥಳೀಯರು ಸ್ಪಷ್ಟಪಡಿಸುತ್ತಾರೆ. ಅರ್ರೈಕಲಾ ಶ್ರೀ ವೆಂಕಟನಾರಾಯಣ ಭಾರತಿಗಳು ಅವರ ಹಿರಿಯರಾದ ಪರಮಾನಂದ ಸ್ವಾಮಿಗಳು, ನರಸಿಂಹ ಭಾರತಿಗಳವರು ಮಠದಲ್ಲಿ ನೆಲೆಸಿದ್ದು ಧರ್ಮ ಪ್ರಚಾರ ಪುರಾಣ ಶ್ರವಣ ಕಥಾಕಾಲಕ್ಷೇಪಗಳನ್ನು ನಡೆಸುತ್ತಿದ್ದರೆಂದು ತಿಳಿದುಬಂದಿದೆ. ತಳಲೂರಿನಲ್ಲಿ ಹಾಗೂ ಚಿಕ್ಕಗಂಡಸಿಯಲ್ಲಿ ಸ್ಮಾರ್ಥ ಹಾಗೂ ಸಂದರಾಮಠದ ಉಲ್ಲೇಖಗಳನ್ನು ಶಾಸನಗಳಲ್ಲಿ ಕಾಣಬಹುದು.

**ದೇವಾಲಯಗಳ ಸ್ಥಾಪನೆ :** ಶ್ರೀವೈಷ್ಣವ ಧರ್ಮದ ಪ್ರಚಾರಕ್ಕೆ ದೇವಾಲಯಗಳ ನಿರ್ಮಾಣ ಬಹಳ ದೊಡ್ಡ ಕೊಡುಗೆಯಾಗಿದೆ. ಜೊತೆಗೆ ದೇವಾಲಯದ ವಾಸ್ತುಶಿಲ್ಪ ಮೂರ್ತಿ ಶಿಲ್ಪಗಳಲ್ಲಿ ಅತ್ಯಂತ ಕಲಾತ್ಮಕವಾಗಿ ವಿಷ್ಣುವಿನ ಪಾರಮ್ಯವನ್ನು ಬಿಂಬಿಸಲಾಗಿದೆ. ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ ಉಂಡಿಗನಾಳಿನಲ್ಲಿ ರಾಮಾನುಜಾಚಾರ್ಯರ ದೊಡ್ಡ ಪ್ರತಿಮೆ ಇರುವುದನ್ನು ನಾವು ಕಾಣಬಹುದು. ಚನ್ನರಾಯಪಟ್ಟಣದ ನವಿಲೆಯ ಭೇರುಂಡದ ಮೊತ್ತದ ಕೂಸುಗಳ ಪಡೆ ಕಂಚಿಯಲ್ಲಿ ನೆಲೆಸಿದ್ದ ಸಂದರ್ಭದಲ್ಲಿ ಬಲ್ಲಾಳನಾಥನ ಭೃತ್ಯರಾಗಿ ಶ್ರೀವೈಷ್ಣವ ದೀಕ್ಷೆ ಪಡೆದುಕೊಂಡು ಶ್ರೀ ವೈಷ್ಣವ ದೇವಾಲಯಗಳ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟರು.

ನೀರ್ಗುಂದ ನಾಡಿನ ಕೆಲವತ್ತಿಯಲ್ಲಿ ಹೊಯ್ಸಳರ ವಿಷ್ಣುವರ್ಧನನ ಸಹೋದರ ಉದಯಾದಿತ್ಯನು ಆಳುತ್ತಿದ್ದು ಅವನನ್ನು ಆಶ್ರಯಿಸಿ ಅಪಾರ ಸಂಖ್ಯೆ ಶ್ರೀ ವೈಷ್ಣವರು ಅಲ್ಲಿ ನೆಲೆಸಿದ್ದು ಅವನ ಸಾವಿನ ನಂತರ ವಿಷ್ಣವರ್ಧನನು ಆ ಮಹಾಜನರಿಗೆ ಅನೇಕ ಸವಲತ್ತುಗಳನ್ನು ಒದಗಿಸಿ ವೈಷ್ಣವ ದೇವಾಲಯಗಳನ್ನು

ವಿನಯವಾಗಿ ನಿರ್ಮಿಸಿದ್ದಾನೆ. ಆಂಗರಸನಹಳ್ಳಿ, ಕುದುರೆಗುಂಡಿ, ನಿಟ್ಟೂರು, ತಿರುಪತಿಹಳ್ಳಿ, ಚಿಗ್ಗಿರಂಗಸ್ವಾಮಿ ಬೆಟ್ಟ, ಹೊನ್ನಾವರ ಇವೆಲ್ಲವೂ ಶ್ರೀ ವೈಷ್ಣವ ಪ್ರಭಾವಕ್ಕೆ ಒಳಗಾಗಿದ್ದವು ಎಂದು ತಿಳಿದುಬರುತ್ತದೆ. ಬೆಂಡೆಕೆರೆಯ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಹಿರಣ್ಯಕಶ್ಯಪು ಸಂಹಾರ ಮೂರ್ತಿಯ ಉಬ್ಬುಶಿಲ್ಪವನ್ನು ಮಾಧವನಾಯಕನು ಕೆತ್ತಿಸಿದ್ದಾನೆ.

ಅರಸೀಕೆರೆಯ ಅಮರಗಿರಿ ಎಂದು ಪ್ರಸಿದ್ಧವಾಗಿರುವ ಮಾಲೆಕಲ್ಲು ತಿರುಪತಿಯು ಈ ಪ್ರದೇಶದ ಪ್ರಸಿದ್ಧ ತೀರ್ಥ ಕ್ಷೇತ್ರವಾಗಿದ್ದು, ನಾನಾ ಜಾತಿಯ ಜನಾಂಗಗಳ ಭಕ್ತಾದಿಗಳನ್ನು ಹೊಂದಿದೆ. ಇದನ್ನು ಬಾಣಾವರದ ತಿಮ್ಮಪ್ಪನಾಯಕನು ನಿರ್ಮಿಸಿದನೆಂದು ಪ್ರತೀತಿ ಇದೆ. ಪ್ರಸಿದ್ಧವಾದ ಬಾಣಾವರದ ಕಂಠೀರಾಯಪೇಟೆ, ಅರಸೀಕೆರೆಯ ಪೇಠೆಗಳಿಗೆ, ಸಂತೆಗಳಿಗೆ ವರ್ತಕ ಸಮೂಹಗಳು ಈ ದೇವನಿಗೆ ಸೇವೆಗಾಗಿ ದಾನ ನೀಡಿದ್ದಾರೆ.

ಜಾವಗಲ್ಲು, ಹಾರನಹಳ್ಳಿ, ಬಾಣಾವರ, ಗರುಡನಗಿರಿ ಮುಂತಾದ ಕಡೆಗಳಲ್ಲಿ ವೈಷ್ಣವ ದೇವಾಲಯಗಳನ್ನು ನಾವು ಕಾಣಬಹುದಾಗಿದೆ. ಜೊತೆಗೆ ಚನ್ನರಾಯಪಟ್ಟಣದ ನುಗ್ಗೆಹಳ್ಳಿಯಲ್ಲಿರುವ ಲಕ್ಷ್ಮೀರಂಗನಾಥ ದೇವಾಲಯವು ವಿಜಯನಗರದ ಅಚ್ಚುತರಾಯನ ಅಧಿಕಾರಿ ಅಮರನಾಯಕ ಬಯಕಾರ ರಮಪ್ಪಯ್ಯ ಇವನ ಸಹಾಯದಿಂದ ಗೋಪುರವನ್ನು ನಿರ್ಮಿಸಲಾಗಿದೆ.

ಅರಸಿಕೆರೆಯಿಂದ ಅನತಿ ದೂರದಲ್ಲಿರುವ ಒಂದು ಪಟ್ಟಣ. ಇಲ್ಲಿ 1234 ರಲ್ಲಿ ಭಟ್ಟ ಸಂಕಣ್ಣ ಮತ್ತು ಗೋಪಣ್ಣ ಹೆಗಡೆ ಎಂಬ ಸಹೋದರರು ಹೊಯ್ಸಳ ಶೈಲಿಯ ಕೇಶವ ಹಾಗೂ ಸೋಮೇಶ್ವರ ದೇವಾಲಯ ಕಟ್ಟಿಸಿದರು. ಕೇಶವ ದೇವಾಲಯವು ತ್ರಿಕೂಟಾಚಲವಾಗಿದ್ದು ಬಿತ್ತಿಯ ಹೊರಭಾಗದಲ್ಲಿ ವಿಷ್ಣುವಿನ ವಿವಿಧ ಅವತಾರಗಳು ಮತ್ತು ಶೈವ ವೈಷ್ಣವ ಶಿಲ್ಪಗಳನ್ನು ಕಂಡರಿಸಲಾಗಿದೆ. ಅದಿಷ್ಠಾನದಲ್ಲಿ ಕುಸುರಿ ಕೆತ್ತನೆಯನ್ನು ಕಂಡರಿಸಲಾಗಿದೆ. ಸೋಮೇಶ್ವರ ಆಲಯವು ಸಹ ಸುಂದರವಾಗಿದ್ದು, ಇದರ ಬಿತ್ತಿ ಭಾಗದಲ್ಲಿ ವಿವಿಧ ಕಥಾನಕ ಶಿಲ್ಪಸಾಲುಗಳನ್ನು ಕಂಡರಿಸಲಾಗಿದೆ. ಈ ಎರಡು ದೇವಾಲಯಗಳು ಸಹ ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಪ್ರಮುಖ ದೇವಾಲಯಗಳ ಲಕ್ಷಣಗಳಿವೆ.

ಉಪಸಂಹಾರ : ಹೀಗೆ ಈ ಭಾಗದಲ್ಲಿ ಕಂದಂಬರ ಕಾಲದಿಂದ ವೈಷ್ಣವ ಧರ್ಮ ಪ್ರಾರಂಭಗೊಂಡು ಹೊಯ್ಸಳರ ಕಾಲದಲ್ಲಿ ಶ್ರೀವೈಷ್ಣವ ಪರಂಪರೆ ಉನ್ನತ ಸ್ಥಾನವನ್ನು ಪಡೆದುಕೊಂಡು ಜನಸಾಮಾನ್ಯರ ಧರ್ಮವಾಗಿ ರೂಪುಗೊಂಡು ಜೈನರ ವಿರುದ್ದ ಹೋರಾಟ ನಡೆಸಿ ಇಂದಿಗೂ ವೈಷ್ಣವ ಧರ್ಮ ಈ ಭಾಗದಲ್ಲಿ ಪ್ರಮುಖ ಧರ್ಮವಾಗಿ ರೂಪುಗೊಂಡಿದೆ.

**ಆಕರ ಗ್ರಂಥಗಳು**

1. ಗೋಪಾಲ್.ಬಾ.ರಾ. (ಸಂ), ಎಪಿಗ್ರಾಫಿಯ ಕರ್ನಾಟಿಕ–ಸಂಪುಟ 2–9, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1973.

2. ನರಸಿಂಹಮೂರ್ತಿ.ಎ.ವಿ.(ಸಂ), ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 10, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, 1997.

3. ಅಂಬಳಿಕೆ ಹಿರಿಯಣ್ಣ (ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2009,

4. ಅನಂತರಂಗಾಚಾರ್ಯ.ಎನ್.ಎಸ್., ಶ್ರೀರಾಮಾನುಜದರ್ಶನ ಅಥವಾ ಶ್ರೀನಿವಾಸ ವಿರಚಿತ ಯತೀಂದ್ರ ಮತ ದೀಪಿಕಾ, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್, ಮಾನಸಗಂಗೋತ್ರಿ, ಮೈಸೂರು, 2005.

5. ಎಚ್ಚೆಸ್ಕೆ, ಶ್ರೀರಾಮಾನುಜ, ಸಾಧನ ಸಾಹಿತ್ಯ ಮಂದಿರ, ಮೈಸೂರು, ಮೊದಲ ಮುದ್ರಣ, 1963.

6.. ಗೋಪಾಲ್.ಬಾ.ರಾ, ಕರ್ನಾಟಕದಲ್ಲಿ ರಾಮಾನುಜಾಚಾರ್ಯರು, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, 1984,

7. ಚಿದಾನಂದಮೂರ್ತಿ .ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನಬುಕ್ ಹೌಸ್, ಬೆಂಗಳೂರು. 2011.

8.. ಲಕ್ಷಣ್ ತೆಲಗಾವಿ, ವಿಜಯನಗರ ಕಾಲದ ರಾಮಾನುಜ ಕೂಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.

9.. Bhandarkar.R.G, Vaishnavism, Shaivism and Minor Religious System, Asian Educational Service, New Delhi, 1995.

10. Hema Chandra Raychaudhuri: Materials for the study of the early history of the vaishnava sect , oriental books reprint corporation, Delhi, Beeondedi, 1975.

11. Ratan Parimoo (Ed.), Vaishnavism In Indian Arts and Culture by S.Setter, Books and Books Publishers, New Delhi, First Ed. – 1987,

12. Rajagopala Chariar.T, THE VAISHNAVATE REFPRMERS OF INDIA, Critica Sketches of Their Live and writings, G.A.Natesan and co., Esplanade, Madras, 1906.

13. Nilakanta Sastri K.A., Development of Religion in South India, Orient Longmans, Bombay, Calcutta, Madras, New Delhi, 1963.